ದಿನಾಂಕಃ **13.07.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ-6 ರವರ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದ ಃ**

01. ನಾನು ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯ ಬಗ್ಗೆ ನನಗೆ ಗೊತ್ತು. ಪ್ರಸ್ತುತ ದಾವೆಯನ್ನು ಜಮೀನು ಮಾಡಿಕೊಡಿ ಎಂದು ಕೇಸ್ ಹಾಕಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಕೇವಲ ಸಹಿ ಮಾಡುತ್ತೇನೆ. ದಿಃ 28.04.1994 ರಂದು ನಾನು, ನನ್ನ ತಂದೆ ಮತ್ತು ನನ್ನ ತಮ್ಮ ಸೇರಿಕೊಂಡು ಪಂಚಾಯಿತಿ ಪಾಲುಪಟ್ಟಿ ಮಾಡಿಕೊಂಡಿರುತ್ತೇವೆ ಮತ್ತು ಅದರಲ್ಲಿ ನಮ್ಮ ಸಹಿಗಳು ಇವೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯ ಸರ್ವೇ ನಂ-87/1 ರಲ್ಲಿ ಕಾಣುವ ಪಾಪೇಗೌಡ ಬಿನ್ ಕರಿಗೌಡ ನನ್ನ ತಂದೆಯಾಗಿರುತ್ತಾರೆ. ನನ್ನ ಹೆಸರು ಪಾಪೇಗೌಡ ನನ್ನ ತಂದೆಯ ಹೆಸರು ಕರಿಗೌಡ. ನಿಪಿ-2 ರ ಪ್ರಕಾರ ನನ್ನ ಹೆಸರಿನಲ್ಲಿ 37 ಗುಂಟೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಸರ್ವೇ ನಂ-83/3 ರ ಆರ್.ಟಿ.ಸಿ.ಯಲ್ಲಿ ನನ್ನ ಹೆಸರಿನಲ್ಲಿ 21 ಗುಂಟೆ ಸ್ವತ್ತು ಇದೆ ಎಂದು ಸದರಿ ಸ್ವತ್ತು ದಾವಾ ಐಟಂ ನಂ-2 ಆಗಿದ್ದು, ಸದರಿ ಸ್ವತ್ತು ನನ್ನ ಹೆಸರಿನಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

2. ಕರಿಗೌಡ ಬಿನ್ ಜವರೇಗೌಡ ಎಂದರೆ ನನ್ನ ತಂದೆ. ನನ್ನ ತಂದೆಯ ಹೆಸರಿನಲ್ಲಿ ಸರ್ವೇ ನಂ-160/3 ಹೊಸಕೊಪ್ಪಲು ಗ್ರಾಮದಲ್ಲಿ 11 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ-161/2 ರಲ್ಲಿ ಹೊಸಕೊಪ್ಪಲು ಗ್ರಾಮದಲ್ಲಿ 9 ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ-160/4 ರಲ್ಲಿ ಹೊಸಕೊಪ್ಪಲು ಗ್ರಾಮದಲ್ಲಿ 17 ಗುಂಟೆ ಜಮೀನು ನನ್ನ ಹೆಸರಿನಲ್ಲೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ-160/2 ರಲ್ಲಿ ಹೊಸಕೊಪ್ಪಲು ಗ್ರಾಮದಲ್ಲಿ 17 ಗುಂಟೆ ಜಮೀನು ನನ್ನ ತಮ್ಮನ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಲಯಕ್ಕೆ ಹಾಜರುಪಡಿಸಿರುವ

ಆರ್.ಟಿ.ಸಿ. ಗಳಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಆರ್.ಟಿ.ಸಿ. ಗಳನ್ನು ಜಮೀನನ್ನು ನಮಗೆ ಮಾಡಿಸಿಕೊಡಿ ಎಂದು ಕೇಳಿಕೊಂಡ ಕಾರಣ ಹಾಜರು ಮಾಡಿರುತ್ತೇನೆ.

3. ನನ್ನ ತಾತನ ಹೆಸರು ಜವರೇಗೌಡ. ನನ್ನ ತಾತನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಕರಿಗೌಡ ಮತ್ತು ಮರಿಮಾಕೇಗೌಡ. ನನ್ನ ತಂದೆ ಕರಿಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು, ಅವರ ಹೆಸರು ಪಾಪೇಗೌಡ, ಪುರುಷೇಗೌಡ, ಮಾಕಮ್ಮ, ಹೊನ್ನಮ್ಮ ಆಗಿರುತ್ತದೆ. ಸದರಿ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ಹೇಳಿಲ್ಲ. ಹೆಣ್ಣು ಮಕ್ಕಳಿಬ್ಬರು ಪ್ರಸ್ತು ತೀರಿಕೊಂಡಿರುತ್ತಾರೆ. ಈ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ಹೇಳಿಲ್ಲ. ಜವರೇಗೌಡ ಮತ್ತು ಅವರ ಮಕ್ಕಳಾದ ಕರಿಗೌಡ ಮತ್ತು ಮರಿಮಾಕೇಗೌಡ ದಿಃ 05.05.1979 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ಎಂ.ಆರ್. ದಾಖಲೆಯನ್ನು ಯಾವ ಕಾರಣಕ್ಕೆ ಹಾಜರುಪಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತ, ತಂದೆ ಮತ್ತು ಚಿಕ್ಕಪ್ಪರ ನಡುವೆ ವಿಭಾಗವಾಗಿರುವ ಕಾರಣ ಅದಕ್ಕೆ ಪೂರಕವಾಗಿ ನಿಪಿ-9 ಎಂ.ಆರ್. ದಾಖಲೆಯನ್ನು ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಮತ್ತು ತಮ್ಮ ಹಿಂದೆ ಒಂದು ಬಾರಿ ದಿಃ 29.03.1994 ರಂದು ವಿಭಾಗ ಮಾಡಿಕೊಂಡಿದ್ದು, ಆ ಸಮಯದಲ್ಲಿ ಸರಿಯಾಗಿ ವಿಭಾಗವಾಗಿರಲಿಲ್ಲ ಎಂದು ಮತ್ತೊಮ್ಮೆ ದಿಃ 28.04.1994 ರಂದು ಪಂಚಾಯಿತಿ ಪಾಲುಪಟ್ಟಿ ಮಾಡಿಕೊಳ್ಳುವ ಮೂಲಕ ಸರಿಯಾಗಿ ವಿಭಾಗ ಮಾಡಿಕೊಂಡು ಅದರ ಆದಾರದ ಮೇಲೆ ನ್ಯಾಯಾಲಯಕ್ಕೆ ಹಾಜರು ಮಾಡಿರುವ ಆರ್.ಟಿ.ಸಿ. ಗಳಂತೆ ಸ್ವತ್ತುಗಳನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಯ ಭಾಗಕ್ಕೆ ದಾವಾ ಐಟಂ ನಂ-5 ಮತ್ತು 6 ಬಂದಿತ್ತು ಎಂದರೆ ಸರಿಯಲ್ಲ. ಸರಿದ ದಾವಾ ಐಟಂ ನಂ-5 ಮತ್ತು 6 ರ ಮೇಲೆ 6 ನೇ ಪ್ರತಿವಾದಿಗೂ ಸಹ ಅರ್ದ ಭಾಗ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಎರಡು ಸ್ವತ್ತುಗಳನ್ನು ಹೊರತುಪಡಿಸಿ ಇತರೆ ಎಲ್ಲ ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ಮೇಲೆ ತಿಳಿಸಿದಂತೆ ನನ್ನ ತಾತ, ತಂದೆ ಮತ್ತು ಚಿಕ್ಕಪ್ಪನ ನಡುವೆಯಾದ ವಿಭಾಗದಲ್ಲಿ ಭಾಗ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಎಲ್ಲ

ವಿಚಾರ ಗೊತ್ತಿದ್ದರು ಸಹ ನ್ಯಾಯಾಲಯದ ಮುಂದೆ ವಿಭಾಗವಾಗಿಲ್ಲ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆಯಾದ ವಿಭಾಗದಲ್ಲಿ ಸ್ವತ್ತುಗಳನ್ನು ಸಮನಾಗಿ ವಿಭಾಗ ಮಾಡಿಕೊಂಡಿದ್ದು, ನನ್ನ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳನ್ನು ಸಹ ನಾವುಗಳು ಸಮನಾಗಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕಿರುಕುಳ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ರಿಂದ 5 ನೇ ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**